Don't enclose any Original Certificates.

ಅರ್ಜಿಯ ಬೆಲೆ ರೂ. 20/-
Application Fee 20/-

ಅರ್ಜಿಯ ಸಂಖ್ಯೆ :
Application No.

ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ದೃಢೀಕರಣದೊಂದಿಗೆ
Please Affix the recent Passport size photograph with attestation

1. ಅರ್ಜಿದಾರರ ಹೆಸರು, ತಂದೆ ಹೆಸರು ಮತ್ತು ವಿಳಾಸ :
Applicant name, Father name and Address :

……………………………………………………..
……………………………………………………..
……………………………………………………..

2. ಲಿಂಗ : ಪುರುಷ / ಸ್ತ್ರೀ
Sex : Male / Female

3. ಮಾಜಿ ಯೋಧರು : ಹೌದು / ಇಲ್ಲ
Ex-Serviceman : Yes / No

4. ಗ್ರಾಮೀಣ ಅಭ್ಯರ್ಥಿ: ಹೌದು / ಇಲ್ಲ
Rural Candidate : Yes / No

5. ಯೋಜನಾ ನಿರಾಶ್ರಿತರು : ಹೌದು / ಇಲ್ಲ
Project displaced individual : Yes / No

6. ಸೇವಾ ನಿರತರು : ಹೌದು / ಇಲ್ಲ
In service : Yes / No

7. ಪ್ರವರ್ಗ : ಎಸ್.ಸಿ. / ಎಸ್.ಟಿ. / 1 / 2ಎ / 2ಬಿ / 3ಎ / 3ಬಿ / ಸಾಮಾನ್ಯ.
Category : SC / ST / 1 / 2A / 2B / 3A / 3B / General

8. ಕನ್ನಡ ಭಾಷಾ ಜ್ಞಾನ : ಇದೆ / ಇಲ್ಲ
If Candidates have Knowledge of Kannada : Yes / No

9. ಜನ್ಮ ದಿನಾಂಕ : ದಿನ ಮಾಸ ವರ್ಷ
Date of Birth : Day Month Year

10. ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರು :
Name of Post for which applied for :

11. ಶೈಕ್ಷಣಿಕ ವಿದ್ಯಾರ್ಹತೆಯಲ್ಲಿನ ಅಂಕಗಳ ವಿವರ : ನಿಗಧಿಪಡಿಸಿರುವ ಅಂಕಗಳು ಗಳಿಸಿರುವ ಅಂಕಗಳು
Details of marks obtained in Academic Qualification Total Marks Marks obtained

ಸ್ಥಳ : ಅಭ್ಯರ್ಥಿಯ ಸಹಿ :
Place : Signature of Applicant :

ದಿನಾಂಕ : ನೋಂದಣಿ ಸಂಖ್ಯೆ :
Date : (ಕಛೇರಿಯ ಉಪಯೋಗಕ್ಕಾಗಿ)
Registration No.
(for Office use only)

ಪಿ.ಆರ್. 142

ಒಳಾಡಳಿತ ಸಚಿವಾಲಯ

ಸಂ. ಒಇ 44 ಪೊಸಿಇ 2007, ಬೆಂಗಳೂರು

ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು.

ಅಧಿಸೂಚನೆ

ಸಂಖ್ಯೆ: ಸಿಬ್ಬಂದಿ/56/06–07, ದಿನಾಂಕ: 15ನೇ ಮಾರ್ಚ್ 2007

ಪೊಲೀಸ್ ಇಲಾಖೆ

ಅಶ್ವಾರೋಹಿದಳದ ಅನುಯಾಯಿಯವರು / ಆರ್ಡರ್ಲಿಯವರ ನೇಮಕಾತಿ

ಅಧಿಸೂಚನೆ

ಪೊಲೀಸ್ ಪ್ರಧಾನ ಕಚೇರಿ ಸಂ.107 ಸಿಬ್ಬಂದಿ–4/05–06, ದಿನಾಂಕ: 23ನೇ ಆಗಸ್ಟ್ 2006

ವಿಷಯ: ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯಲ್ಲಿ ಅನುಯಾಯಿ / ಆರ್ಡರ್ಲಿಯವರ ನೇಮಕಾತಿ ಕುರಿತು.

1. ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು ಇಲ್ಲಿ ಅಶ್ವಾರೋಹಿದಳದ ಅನುಯಾಯಿ ಹುದ್ದೆಗಳಿಗೆ ಹಾಗೂ ಆಂಗ್ಲ ವಾದ್ಯವೃಂದ ವಿಭಾಗದ ಆರ್ಡರ್ಲಿ ಹುದ್ದೆ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು ಲಿಪಿಕ ವೃಂದ ಸೇರಿದಂತೆ (ನೇಮಕಾತಿ) ನಿಯಮಗಳು, 2004ರ ಹಾಗೂ ಸರ್ಕಾರದ ಅಧಿಸೂಚನೆ ಸಂ.ಡಿಪಿಎಆರ್:13:ಎಸ್‌ಬಿಸಿ:2001, ದಿ: 21–11–01 ಮತ್ತು 1–6–02ರ ಅನುಸಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಅಭ್ಯರ್ಥಿಗಳು ನಿಗದಿತ ಅರ್ಜಿ ಶುಲ್ಕ (50/– ರೂ. ಮಾತ್ರ)ಗಳನ್ನು ನಗದು ನೀಡಿ ಕೆಎಆರ್‌ಪಿ ಮೌಂಟೆಡ್

ಕಂಪೆನಿ, ಲಲಿತಮಹಲ್ ರಸ್ತೆ, ಮೈಸೂರು ಇಲ್ಲಿ ದಿನಾಂಕ: 26–3–07ರಿಂದ 9–4–07ರವರೆಗೆ ಅರ್ಜಿಗಳನ್ನು ಬೆಳಿಗ್ಗೆ 10–00 ಗಂಟೆಯಿಂದ ಸಾಯಂಕಾಲ 05–00 ರವರೆಗೆ ಎಲ್ಲಾ ಕೆಲಸದ ದಿನಗಳಂದು (Working Days) ಪಡೆದುಕೊಳ್ಳಬಹುದಾಗಿದೆ. ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಿದ ಅರ್ಜಿಗಳನ್ನು ದಿ:9–4–07ರಂದು ಸಾಯಂಕಾಲ 6–00 ಗಂಟೆಯೊಳಗೆ ಅಥವಾ ಅದಕ್ಕಿಂತ ಮುಂಚಿತವಾಗಿ ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಲಲಿತಮಹಲ್ ರಸ್ತೆ, ಮೈಸೂರು ಇಲ್ಲಿ ಖುದ್ದಾಗಿ ಸಲ್ಲಿಸತಕ್ಕದ್ದು. ಕೊರಿಯರ್ ಅಥವಾ ಅಂಚೆ ಮುಖಾಂತರ ಕಳುಹಿಸಲಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸರಿಯಾಗಿ ಭರ್ತಿ ಮಾಡಿದ ಹಾಗೂ ಖುದ್ದಾಗಿ ಕೌಂಟರ್‌ನಲ್ಲಿ ನೀಡುವ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು.

ಈ ಹುದ್ದೆಗಳಿಗೆ ಪುರುಷ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ. ಅನುಯಾಯಿಗಳ, ಆಂಗ್ಲ ವಾದ್ಯವೃಂದದ ಆರ್ಡರ್ಲಿ ಮತ್ತು ಆಂಗ್ಲ ವಾದ್ಯವೃಂದ ಆರ್ಡರ್ಲಿ ಬ್ಯಾಕ್‌ಲಾಗ್ ಹುದ್ದೆಯ ವರ್ಗೀಕರಣವನ್ನು ಅಧಿಸೂಚನೆಯ ಅನುಬಂಧ ಅ, ಆ, ಇ ನಲ್ಲಿ ನೋಡುವುದು.

2) ವಯೋಮಿತಿ, ವಿದ್ಯಾರ್ಹತೆ ಮತ್ತು ವೇತನ ಶ್ರೇಣಿ:

(1) ವಯೋಮಿತಿ: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು (ಅಂದರೆ 9–4–07ಕ್ಕೆ) ಅಭ್ಯರ್ಥಿಗೆ ಕನಿಷ್ಠ 19 ವರ್ಷ ವಯಸ್ಸಾಗಿರಬೇಕು ಮತ್ತು ಈ ಕೆಳಕಂಡಂತೆ ಗರಿಷ್ಠ ವಯೋಮಿತಿ ಮೀರಿರಬಾರದು.

ಎ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ 30 ವರ್ಷ

ಬಿ) ಸಾಮಾನ್ಯ ವರ್ಗ 25 ವರ್ಷ

(2) ಕನಿಷ್ಠ ವಿದ್ಯಾರ್ಹತೆ:

7ನೇ ತರಗತಿ ತೇರ್ಗಡೆಯಾಗಿರಬೇಕು.

ಆದ್ಯತೆ:

ಸಂಬಂಧಿಸಿದ ವೃತ್ತಿಪರ ಶಿಕ್ಷಣದಲ್ಲಿ ನೈಪುಣ್ಯತೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

(3) ವೇತನ ಶ್ರೇಣಿ: ರೂ.2600–50–2700–75–3450–100–4350.

3) ಲಿಖಿತ ಪರೀಕ್ಷೆ :

ಅರ್ಹ ಅಭ್ಯರ್ಥಿಗಳಿಗೆ ಕನ್ನಡದಲ್ಲಿ ಪ್ರಬಂಧವನ್ನೊಳಗೊಂಡ 50 ಅಂಕಗಳ ಲಿಖಿತ ಪರೀಕ್ಷೆ ಇರುವುದು. ಲಿಖಿತ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಎಲ್ಲಾ ಕೆಟಗರಿಗಳಲ್ಲಿ 1:5ರ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು. ವೈದ್ಯಕೀಯ ಪರೀಕ್ಷೆಯಲ್ಲಿ ವಿಫಲರಾದ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು. ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹರಾದವರಿಗೆ ನೈಪುಣ್ಯತೆ ಪರೀಕ್ಷೆ ಮಾಡಲಾಗುವುದು. ಇದಕ್ಕೆ 50 ಅಂಕಗಳಿರುತ್ತವೆ. ಲಿಖಿತ ಪರೀಕ್ಷೆ ಮತ್ತು ನೈಪುಣ್ಯತೆ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಧಿಸೂಚನೆಯ ಖಾಲಿ ಹುದ್ದೆಗಳಿಗೆ ವರ್ಗೀಕರಣದಂತೆ ಆಯ್ಕೆ ಮಾಡಲಾಗುವುದು ಮತ್ತು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುವುದು.

ಖಾಯಂಪೂರ್ವ ಅವಧಿ: 2 ವರ್ಷ.

ಆಂಗ್ಲ ವಾದ್ಯವೃಂದಲ್ಲಿರುವ ಆರ್ಡರ್ಲಿ (ಬ್ಯಾಕ್‌ಲಾಗ್) ಹುದ್ದೆಗೆ:

1. ವಯೋಮಿತಿ: ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು (ಅಂದರೆ, 9–4–2007ಕ್ಕೆ) ಅಭ್ಯರ್ಥಿಗೆ ಕನಿಷ್ಠ 19 ವರ್ಷ ವಯಸ್ಸಾಗಿರಬೇಕು ಹಾಗೂ ಗರಿಷ್ಠ 40 ವರ್ಷ ಮೀರಿರಬಾರದು.

2. ಕನಿಷ್ಠ ವಿದ್ಯಾರ್ಹತೆ:

7ನೇ ತರಗತಿ ತೇರ್ಗಡೆಯಾಗಿರಬೇಕು.

ಆದ್ಯತೆ:

ಸಂಬಂಧಿಸಿದ ವೃತ್ತಿಪರ ಶಿಕ್ಷಣದಲ್ಲಿ ನೈಪುಣ್ಯತೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

(3) ವೇತನ ಶ್ರೇಣಿ: ರೂ.2600–50–2700–75–3450–100–4350.

(4) ಆಯ್ಕೆ ವಿಧಾನ: ಅರ್ಹ ಅಭ್ಯರ್ಥಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು. ವೈದ್ಯಕೀಯ ಪರೀಕ್ಷೆಯಲ್ಲಿ ವಿಫಲರಾದ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು. ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು. ಅರ್ಹತಾಪಟ್ಟಿಯನ್ನು ತಯಾರಿಸುವಾಗ ಸರ್ಕಾರದ ಅಧಿಸೂಚನೆ ಸಂ. ಡಿಪಿಎಆರ್ 13 ಎಸ್‌ಬಿಸಿ 01, ದಿ: 21–11–01ರನ್ವಯ ಕನಿಷ್ಠ 29 ವರ್ಷ ವಯಸ್ಸಾಗಿರುವ ಹಾಗೂ ಗರಿಷ್ಠ 40 ವರ್ಷ ಮೀರದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. 29 ವರ್ಷದಿಂದ 40 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ದೊರಕದಿದ್ದಲ್ಲಿ 19 ವರ್ಷದಿಂದ 29 ವರ್ಷದೊಳಗಿನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಖಾಯಂಪೂರ್ವ ಅವಧಿ: 2 ವರ್ಷ.

ಅಧ್ಯಕ್ಷರು,
ಕರ್ನಾಟಕ ಸರ್ಕಾರ ಪೊಲೀಸ್ ಅಶ್ವದಳದ ಅನುಯಾಯಿ ಮತ್ತು
ಆರ್ಡರ್ಲಿ ನೇಮಕಾತಿ ಸಮಿತಿ
ಹಾಗೂ ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು.

ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯ ಅನುಯಾಯಿ ಮತ್ತು ಆಂಗ್ಲ ವಾದ್ಯವೃಂದದ ಆರ್ಡರ್ಲಿ ಹಾಗೂ ಬ್ಯಾಕ್‌ಲಾಗ್ ಹುದ್ದಗೆ ಅರ್ಜಿ ಸಲ್ಲಿಸುವ ಬಗ್ಗೆ ಮತ್ತು ಇತರ ವಿವರಗಳು.

ಅರ್ಜಿ ಸಲ್ಲಿಸುವ ವಿಧಾನ ಮತ್ತು ಶುಲ್ಕ

ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸ್ವಹಸ್ತಾಕ್ಷರಗಳಲ್ಲಿ ಸ್ಪಷ್ಟವಾಗಿ ಭರ್ತಿಗೊಳಿಸಬೇಕು. ಭರ್ತಿಗೊಂಡ ಅರ್ಜಿಯನ್ನು ದಿನಾಂಕ: 26-3-07ರಿಂದ ದಿ:8-4-07ರವರೆಗೆ ಬೆಳಿಗ್ಗೆ 10-00 ಗಂಟೆಯಿಂದ ಸಾಯಂಕಾಲ 5-00 ಗಂಟೆಯವರೆಗೆ ಎಲ್ಲಾ ಕೆಲಸದ ದಿನಗಳಂದು (Working days) ಮತ್ತು ದಿ:9-4-07 ರಂದು ಸಾಯಂಕಾಲ 6-00 ಗಂಟೆಯವರೆಗೆ ಖುದ್ದಾಗಿ ಈ ಕಚೇರಿಗೆ ಸಲ್ಲಿಸಬೇಕು. ಅರ್ಜಿಯ ಜೊತೆಗೆ ಇತರೆ ಅಭ್ಯರ್ಥಿಗಳು ರೂ.150/- ನಗದನ್ನು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ 1 ಅಭ್ಯರ್ಥಿಗಳಿಗೆ ರೂ.50-00 ಹಾಗೂ ಬ್ಯಾಕ್ ಲಾಗ್ ಹುದ್ದೆಗಳಿಗೆ ರೂ.50-00 ನಗದನ್ನು ಪರೀಕ್ಷಾ ಶುಲ್ಕವಾಗಿ ಅರ್ಜಿಗಳನ್ನು ಸ್ವೀಕರಿಸುವ ಕಮಾಂಡೆಂಟ್, ಕೆಎಆರ್‌ಪಿ ಮೌಂಟೆಡ್ ಕಂಪೆನಿ, ಲಲಿತಮಹಲ್ ರಸ್ತೆ, ಮೈಸೂರು ಇವರ ಕಚೇರಿಯಲ್ಲಿ ಮಾತ್ರ ಪಾವತಿಸಬೇಕು. ನಗದು ರೂಪದಲ್ಲಿ ಶುಲ್ಕ ಪಾವತಿಸದಿದ್ದರೆ ಅರ್ಜಿಯನ್ನು ಸ್ವೀಕರಿಸುವುದಿಲ್ಲ. ಕೊರಿಯರ್ / ಅಂಚೆ ಮೂಲಕ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. **ಅಭ್ಯರ್ಥಿಗಳು ಅಶ್ವಾರೋಹಿದಳದ ಅನುಯಾಯಿ ಇಲ್ಲವೆ ವಾದ್ಯವೃಂದದ ಆರ್ಡರ್ಲಿ / ಬ್ಯಾಕ್‌ಲಾಗ್ ಹುದ್ದೆ ಇವುಗಳಲ್ಲಿ ಯಾವುದಾದರೂ ಒಂದು ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸಬೇಕು.**

ಲಗತ್ತುಗಳು:

1. ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸರ್ಟಿಫಿಕೇಟ್‌ನ ಝೆರಾಕ್ಸ್ ಪ್ರತಿ.
2. ವೃತ್ತಿಪರ ನೈಪುಣ್ಯತೆ ಸರ್ಟಿಫಿಕೇಟ್ ಇದ್ದಲ್ಲಿ ಅದರ ಝೆರಾಕ್ಸ್ ಪ್ರತಿ.
3. ಹುಟ್ಟಿದ ದಿನಾಂಕದ ಪ್ರಮಾಣ ಪತ್ರದ ಬಗ್ಗೆ (ಶಾಲಾ ದಾಖಲೆ ಅಥವಾ ವರ್ಗಾವಣೆ ಪತ್ರ (T.C.) ಅಥವಾ ಇತರ ದಾಖಲಾತಿ ಝೆರಾಕ್ಸ್ ಪ್ರಮಾಣ ಪತ್ರ)

3) ರೂ. 5/- ಅಂಚೆ ಚೀಟಿಯನ್ನು ಹಚ್ಚಿದ ಎರಡು ಲಕೋಟೆ 9"X4" (Envelope) ಯಲ್ಲಿ ನಿಮ್ಮ ಖಾಯಂ ಅಂಚೆಯ ವಿಳಾಸವನ್ನು ಬರೆದು ಅರ್ಜಿಯೊಂದಿಗೆ ಲಗತ್ತಿಸುವುದು.

4) ಅರ್ಜಿಯಲ್ಲಿ ಫೋಟೋ ಅಂಟಿಸಲು ನಿಗದಿಪಡಿಸಿರುವ ಜಾಗದಲ್ಲಿ ನಿಮ್ಮ ಇತ್ತೀಚಿನ (6 ತಿಂಗಳೊಳಗಿನ) ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಪೂರ್ಣ ಸಹಿ ಮಾಡುವುದು.

5) ಯಾವುದೇ ಪ್ರವರ್ಗದ ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು ಜಾತಿ ಪ್ರಮಾಣ ಪತ್ರವನ್ನು ಈ ಕೆಳಕಂಡ ನಮೂನೆಗಳಲ್ಲಿ ಸಲ್ಲಿಸತಕ್ಕದ್ದು.

ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ-ಡಿ"ರಲ್ಲಿ (ಝೆರಾಕ್ಸ್ ಪ್ರಮಾಣ ಪತ್ರ)

ಬಿ) ವರ್ಗ-1ರ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ ಇ"ರಲ್ಲಿ (ಜೆರಾಕ್ಸ್ ಪ್ರಮಾಣ ಪತ್ರ)

ಸಿ) ವರ್ಗ - 2ಎ, 2ಬಿ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ "ನಮೂನೆ-ಎಫ್" ರಲ್ಲಿ (ಜೆರಾಕ್ಸ್ ಪ್ರಮಾಣ ಪತ್ರ).

ಸೂಚನೆ: "ನಮೂನೆ-ಎಫ್" ಪ್ರಮಾಣ ಪತ್ರವು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಒಂದು ವರ್ಷದೊಳಗೆ ನೀಡಿರುವ ಪ್ರಮಾಣ ಪತ್ರವಾಗಿರಬೇಕೆಂಬುದನ್ನು ಅಭ್ಯರ್ಥಿಯು ಗಮನದಲ್ಲಿಡತಕ್ಕದ್ದು.

ವಿಶೇಷ ಸೂಚನೆಗಳು:

1) ಅರ್ಜಿ ಸಲ್ಲಿಸುವವರು ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸುವರೋ ಆ ಹುದ್ದೆಗೆ (ಅಶ್ವದಳದ ಅನುಯಾಯಿ / ಆಂಗ್ಲ ವಾದ್ಯವೃಂದದ ಆರ್ಡರ್ಲಿ / ಬ್ಯಾಕ್‌ಲಾಗ್ ಹುದ್ದೆಗೆ ಎಂದು) ಬರೆಯಬೇಕು. ಅಭ್ಯರ್ಥಿಗಳು ಯಾವುದಾದರೂ ಒಂದು ಹುದ್ದೆಗೆ ಅರ್ಜಿ ಸಲ್ಲಿಸಬೇಕು.

2) ಬ್ಯಾಕ್‌ಲಾಗ್ ಹುದ್ದೆಗಳಿಗೆ ಕನಿಷ್ಠ 29 ವರ್ಷ ವಯಸ್ಸಾಗಿರುವ ಹಾಗೂ ಗರಿಷ್ಠ 40 ವರ್ಷ ಮೀರದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. 29 ವರ್ಷದಿಂದ 40 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ದೊರಕದಿದ್ದಲ್ಲಿ 19 ವರ್ಷದಿಂದ 29 ವರ್ಷದೊಳಗಿನ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

3) ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನಾ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳಿಗೆ ಪೂರಕವಾಗಿ ಸದರಿ ದಾಖಲಾತಿ / ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ಸದರಿ ಸೌಲಭ್ಯಗಳನ್ನು ಅಭ್ಯರ್ಥಿಗಳು ಕಳೆದುಕೊಳ್ಳುತ್ತಾರೆ. ಆದರೆ ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.

4) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಮೊದಲು ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ಶೈಕ್ಷಣಿಕ ಕನಿಷ್ಟ ವಿದ್ಯಾರ್ಹತೆಯನ್ನು ಹೊಂದಿರಲೇಬೇಕು.

5) ಪರೀಕ್ಷೆಗೆ ಪ್ರವೇಶವು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ. ಪ್ರವೇಶ ಪತ್ರ ನೀಡಿದ ಮಾತ್ರಕ್ಕೆ ನೇಮಕಾತಿ ಸಮಿತಿಯು ನಿಮ್ಮ ಅಭ್ಯರ್ಥಿತನವನ್ನು ಅಂಗೀಕರಿಸಿದೆ ಎಂದು ಭಾವಿಸತಕ್ಕದ್ದಲ್ಲ.

6) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸಲಹೆ ನೀಡಿದೆ.

7) ಲಿಖಿತ ಪರೀಕ್ಷೆ, ನೈಪುಣ್ಯತೆ ಪರೀಕ್ಷೆ,ಯನ್ನು ಮೈಸೂರು ನಗರದಲ್ಲಿ ನಡೆಸಲಾಗುವುದು. ಇವುಗಳು ನಡೆಯುವ ಸ್ಥಳ, ದಿನಾಂಕ, ವೇಳೆಯನ್ನು ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ ಕಚೇರಿಯಲ್ಲಿ ಪ್ರಕಟಿಸಲಾಗುವುದು.

8) ಪ್ರಶ್ನೆಪತ್ರಿಕೆಯ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಆಯಾ ಪರೀಕ್ಷಾ ದಿನವೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅವರ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ನೇಮಕಾತಿ ಸಮಿತಿಗೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

9) ಕರ್ನಾಟಕ ರಾಜ್ಯದ, ಕೇಂದ್ರ ಸರ್ಕಾರದ ಯಾವುದೇ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

10) ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ / ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆಯುವುದು, ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ, ಅದೇ ಹಂತದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಅವರ ಅಭ್ಯರ್ಥಿತನವನ್ನು ರದ್ದುಗೊಳಿಸುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

11) ಅಭ್ಯರ್ಥಿಯು ಹುದ್ದೆಗೆ ಅರ್ಜಿ ಸಲ್ಲಿಸಿದ ತಕ್ಷಣ ತಾನು ನಿಯಮ ಮತ್ತು ಅಧಿನಿಯಮಗಳಿಗೆ (Rules & Regulations) ಬದ್ಧನಾಗಿರುತ್ತಾನೆ ಎಂದು ಭಾವಿಸಲಾಗಿರುತ್ತದೆ. ಒಂದು ವೇಳೆ ತಾನು ಸದರಿ ಹುದ್ದೆಗೆ ಆಯ್ಕೆಯಾಗದ ಪಕ್ಷದಲ್ಲಿ ತದನಂತರ ಅದೇ ನಿಯಮಗಳನ್ನು ಪ್ರಶ್ನಿಸಲು ಬರುವುದಿಲ್ಲ.

ಅಧ್ಯಕ್ಷರು,
ಕರ್ನಾಟಕ ಸರ್ಕಾರ ಪೊಲೀಸ್ ಅಶ್ವದಳದ ಅನುಯಾಯಿ ಮತ್ತು
ಆರ್ಡರ್ಲಿ ನೇಮಕಾತಿ ಸಮಿತಿ
ಹಾಗೂ ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು.

ಅನುಬಂಧ – ಅ

ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯ ಅಶ್ವದಳದಲ್ಲಿ ಖಾಲಿ ಇರುವ 9 ಅನುಯಾಯಿ ಹುದ್ದೆಗಳ ವರ್ಗೀಕರಣ ಈ ಕೆಳಗಿನಂತಿದೆ. ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಇದನ್ನು ಬದಲಾವಣೆ ಮಾಡಿಕೊಳ್ಳಬಹುದಾಗಿದೆ.

ವರ್ಗ	ಒಟ್ಟು ಹುದ್ದೆಗಳ ಸಂಖ್ಯೆ	ಮಾಜಿ ಸೈನಿಕರು	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಇತರರು
ಸಾಮಾನ್ಯ ವರ್ಗ	4	–	–	4
ಪರಿಶಿಷ್ಟ ಜಾತಿ	1	–	–	1
ಪರಿಶಿಷ್ಟ ಪಂಗಡ	1	–	–	1
ಪ್ರವರ್ಗ–1	1	–	–	1
ಪ್ರವರ್ಗ–2ಎ	1	–	–	1
ಪ್ರವರ್ಗ 2ಬಿ	1	–	–	1
ಪ್ರವರ್ಗ 3ಎ	–	–	–	–
ಪ್ರವರ್ಗ 3ಬಿ	–	–	–	–
ಒಟ್ಟು	**9**	–	–	**9**

ಖಾಲಿ ಇರುವ ಅನುಯಾಯಿ ಹುದ್ದೆಗಳ ವಿವರ:

1. ಕಾಬ್ಲರ್ (ಚರ್ಮದ ಕೆಲಸ ನಿರ್ವಹಿಸುವುದು, ಸ್ಯಾಡಲ್, ಶೂ ಇತರೆ ಚರ್ಮದ ವಸ್ತುಗಳನ್ನು ಹೊಲೆಯುವುದು, ದುರಸ್ತಿ ಮಾಡುವುದು ಇತ್ಯಾದಿ) – 1 ಹುದ್ದೆ
2. ಇತರೆ (ಅಶ್ವಗಳ ಲದ್ದಿ ಎತ್ತುವುದು, ಗಂಜಲ ತೆಗೆಯುವುದು ಮತ್ತು ಲಾಯ ಸ್ವಚ್ಛಗೊಳಿಸುವುದು ಹಾಗೂ ಇತರೆ ಶುಚಿತ್ವದ ಕೆಲಸ ನಿರ್ವಹಣೆ) – 8 ಹುದ್ದೆ

ಅಧ್ಯಕ್ಷರು,
ಕರ್ನಾಟಕ ಸರ್ಕಾರ ಪೊಲೀಸ್ ಅಶ್ವದಳದ ಅನುಯಾಯಿ ಮತ್ತು
ಆರ್ಡರ್ಲಿ ನೇಮಕಾತಿ ಸಮಿತಿ
ಹಾಗೂ ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು.

ಅನುಬಂಧ – ಆ

ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯ ಆಂಗ್ಲ ವಾದ್ಯವೃಂದ ವಿಭಾಗದಲ್ಲಿ ಖಾಲಿ ಇರುವ 01 ಆರ್ಡರ್ಲಿ ಹುದ್ದೆಗಳ ವರ್ಗೀಕರಣ ಈ ಕೆಳಗಿನಂತಿದೆ.

ವರ್ಗ	ಒಟ್ಟು ಹುದ್ದೆಗಳ ಸಂಖ್ಯೆ	ಮಾಜಿ ಸೈನಿಕರು	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಇತರರು
ಸಾಮಾನ್ಯ ವರ್ಗ	–	–	–	–
ಪರಿಶಿಷ್ಟ ಜಾತಿ	–	–	–	–
ಪರಿಶಿಷ್ಟ ಪಂಗಡ	1	–	–	1
ಪ್ರವರ್ಗ–1	–	–	–	–
ಪ್ರವರ್ಗ–2ಎ	–	–	–	–
ಪ್ರವರ್ಗ 2ಬಿ	–	–	–	–
ಪ್ರವರ್ಗ 3ಎ	–	–	–	–
ಪ್ರವರ್ಗ 3ಬಿ	–	–	–	–
ಒಟ್ಟು	1	–	–	1

ಆರ್ಡರ್ಲಿಗಳ ಕರ್ತವ್ಯ: ವಾದ್ಯವೃಂದ ಕಚೇರಿ ಶುಚಿಗೊಳಿಸುವುದು ಹಾಗೂ ವಾದ್ಯಗಳನ್ನು ನುಡಿಸಲು ಸ್ಟ್ಯಾಂಡ್‌ಗಳನ್ನು ಇಡುವುದು, ತೆಗೆಯುವುದು ಮತ್ತು ವಾದ್ಯೋಪಕರಣ ಸ್ವಚ್ಛಮಾಡುವುದು ಹಾಗೂ ಇತರೆ ಕಚೇರಿ ಕೆಲಸಗಳನ್ನು ನಿರ್ವಹಿಸುವುದು.

ಅಧ್ಯಕ್ಷರು,
ಕರ್ನಾಟಕ ಸರ್ಕಾರ ಪೊಲೀಸ್ ಅಶ್ವದಳದ ಅನುಯಾಯಿ ಮತ್ತು
ಆರ್ಡರ್ಲಿ ನೇಮಕಾತಿ ಸಮಿತಿ
ಹಾಗೂ ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು.

ಅನುಬಂಧ – ಇ

ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿಯ ಆಂಗ್ಲ ವಾದ್ಯವೃಂದ ವಿಭಾಗದಲ್ಲಿ ಖಾಲಿ ಇರುವ 01 ಆರ್ಡರ್ಲಿ ಬ್ಯಾಕ್‌ಲಾಗ್ ಹುದ್ದೆಯ ವರ್ಗೀಕರಣ ಈ ಕೆಳಗಿನಂತಿದೆ.

ವರ್ಗ	ಒಟ್ಟು ಹುದ್ದೆಗಳ ಸಂಖ್ಯೆ	ಮಾಜಿ ಸೈನಿಕರು	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಇತರರು
ಪರಿಶಿಷ್ಟ ಜಾತಿ	1	–	–	1
ಪರಿಶಿಷ್ಟ ಪಂಗಡ	–	–	–	–
ಒಟ್ಟು	1	–	–	1

ಆರ್ಡರ್ಲಿಗಳ ಕರ್ತವ್ಯ: ವಾದ್ಯವೃಂದ ಕಚೇರಿ ಶುಚಿಗೊಳಿಸುವುದು ಹಾಗೂ ವಾದ್ಯಗಳನ್ನು ನುಡಿಸಲು ಸ್ಟ್ಯಾಂಡ್‌ಗಳನ್ನು ಇಡುವುದು, ತೆಗೆಯುವುದು ಮತ್ತು ವಾದ್ಯೋಪಕರಣ ಸ್ವಚ್ಛಮಾಡುವುದು ಹಾಗೂ ಇತರೆ ಕಚೇರಿ ಕೆಲಸಗಳನ್ನು ನಿರ್ವಹಿಸುವುದು.

ಅಧ್ಯಕ್ಷರು,
ಕರ್ನಾಟಕ ಸರ್ಕಾರ ಪೊಲೀಸ್ ಅಶ್ವದಳದ ಅನುಯಾಯಿ ಮತ್ತು
ಆರ್ಡರ್ಲಿ ನೇಮಕಾತಿ ಸಮಿತಿ
ಹಾಗೂ ಕಮಾಂಡೆಂಟ್, ಕೆ.ಎ.ಆರ್.ಪಿ. ಮೌಂಟೆಡ್ ಕಂಪೆನಿ, ಮೈಸೂರು.

(ಪ.ಜಾ/ಪ.ಪಂ.ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನ ಮೂ ನೆ – ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ./ಪ.ಪಂ)ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ.

ಪ್ರಮಾಣ ಪತ್ರ

________ರಾಜ್ಯದ / ಕೇಂದ್ರಾಡಳಿತ ಪ್ರದೇಶದ * ––––––––––––––––––––ಜಿಲ್ಲೆಯ/ ವಿಭಾಗದ ________ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ____________ ಎಂಬುವರ ಮಗ/ಮಗಳಾದ ಶ್ರೀ/ಶ್ರೀಮತಿ________ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು

* ಎಂದು ಮಾನ್ಯ ಮಾಡಲಾಗಿರುವ ಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣಿಕರಿಸಲಾಗಿದೆ.
* ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್‌ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್‌ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್‌ರಚನಾ ಅಧಿನಿಯಮ, 1971ರ ಮೂಲಕ ತಿದ್ದುಪಡಿಯಾದಂತೆ).

* ಸಂವಿಧಾನ
* ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
* ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
* ಸಂವಿಧಾನ (ದಾದರ್) ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962
* ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
* ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ / ಬುಡಕಟ್ಟುಗಳ ಆದೇಶ 1988.
* ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ/ಕುಮಾರಿ* ____________ ಮತ್ತು/ಅಥವಾ ಅವನ*/ಅವಳ* ಕುಟುಂಬವು___________ರಾಜ್ಯ / ಕೇಂದ್ರಾಡಳಿತ ಪ್ರದೇಶದ _______________ಜಿಲ್ಲಾ / ವಿಭಾಗದ _____________ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ (ಗಳು).

ಸಹಿ ___________

ತಹಶೀಲ್ದಾರರು ________

ಸ್ಥಳ: ಪದನಾಮ

ದಿನಾಂಕ: ಕಛೇರಿಯ ಮೊಹರಿನೊಂದಿಗೆ

ರಾಜ್ಯ / ಕೇಂದ್ರಾಡಳಿತ ಪ್ರದೇಶ *

*** ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟು ಬಿಡಿ / ಹೊಡೆದು ಹಾಕಿ.**

ಸೂಚನೆ: ಇಲ್ಲಿ ಉಪಯೋಗಿಸಿದ "ಸಾಮಾನ್ಯ ನಿವಾಸಿಗಳೂ" ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ..

ಭಾರತ ಸರ್ಕಾರದ ಪತ್ರ ಸಂಖ್ಯೆ. ಬಿಸಿ 12028/2/76–ಎಸ್‌ಸಿಟಿ–1 ಗೃಹ ಮಂತ್ರಾಲಯದ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ. 13.02.74 ಇಎಸ್‌ಟಿ (ಎಸ್‌ಸಿಟಿ) ದಿನಾಂಕ 5ನೇ ಆಗಸ್ಟ್ 1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು. ಅದೇ ರೀತಿಯಲ್ಲಿ, ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

(ಪ್ರವರ್ಗ–2ಎ, 2ಬಿಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ – ಎಫ್

(ನಿಯಮ 3ಎ (2) (3)ನ್ನು ನೋಡಿ)

ಹಿಂದುಳಿದ ವರ್ಗಗಳಿಗೆ (2ಎ, 2ಬಿ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ.

____________________ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ __________________. ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ __________________ಇವರು ಮತ್ತು ಆತನ / ಅವಳ ತಂದೆ / ತಾಯಿ / ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.03.2002ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು :

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು ;

ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ;

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000–12000/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ / ಆಕೆಯ ತಂದೆ ತಾಯಿ / ಪೋಷಕರು/ಪತ್ನಿ/ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು:

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರಲ್ಲಿ ನಿಗದಿಪಡಿಸಿರುವಂತೆ ಆತನ/ಆಕೆಯ ತಂದೆ ತಾಯಿ / ಪೋಷಕರು/ಪತ್ನಿ/ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ/ಆಕೆಯ ತಂದೆ ತಾಯಿ/ಪೋಷಕ/ ಪತ್ನಿ/ಪತಿಯು ಅಥವಾ ಇವರಿಬ್ಬರೂ 10 ಯೂನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.3.2002ರ ಅನ್ವಯ ಶ್ರೀ/ಶ್ರೀಮತಿ ಕುಮಾರಿ_____________ಇವರು _______________ಜಾತಿಗೆ _______________ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ 30.3.2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ _____________ (2ಎ, 2ಬಿ, 3ಎ, 3ಬಿ) ಸೇರಿರುತ್ತಾರೆ.

ಸ್ಥಳ:
ದಿನಾಂಕ:

ತಹಶೀಲ್ದಾರರು,
________ತಾಲ್ಲೂಕು,
ಕಛೇರಿಯ ಮೊಹರು.

(ಪ್ರವರ್ಗ– 1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನ ಮೂ ನೆ – ಇ

(ನಿಯಮ 3ಎ (2) (3) ನೋಡಿ)

ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣ ಪತ್ರ

____________________ಗ್ರಾಮ / ಪಟ್ಟಣದ / ನಗರನಿವಾಸಿಯಾದ ಶ್ರೀ / ಶ್ರೀಮತಿ__________________ __ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ __________________ಇವರು ಹಿಂದುಳಿದ ವರ್ಗಗಳ (ಪ್ರವರ್ಗ)______________ಜಾತಿಯ______________ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:
ದಿನಾಂಕ:

ತಹಶೀಲ್ದಾರರು
---------- ತಾಲ್ಲೂಕು
ಕಛೇರಿಯ ಮೊಹರು.

ಪಿ.ಆರ್. 144

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯ್ಕೆ ಪ್ರಾಧಿಕಾರಿ ಹಾಗೂ ಜಿಲ್ಲಾ ಉಪನಿರ್ದೇಶಕರ ಕಛೇರಿ, ಸಾರ್ವಜನಿಕರ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು-02

ತಿದ್ದುಪಡಿ ನೇಮಕಾತಿ ಅಧಿಸೂಚನೆ

ಸಂಖ್ಯೆ: ಆ2.ಪ್ರಾ.ಶಿ.ನೇ/06/2006-07, ದಿನಾಂಕ: 15ನೇ ಮಾರ್ಚ್ 2007

ನೇಮಕಾತಿ ಅಧಿಸೂಚನೆ ಸಂಖ್ಯೆ: ಸಿ3(1) ಪ್ರಾ.ಶಿ.ಪ್ರಾ.ಶಾಶಿ ನೇಮಕ/2006-07, ದಿನಾಂಕ: 11.1.2007 ರಂತೆ ಕರ್ನಾಟಕ ರಾಜ್ಯ ಪತ್ರ ವಿಶೇಷ ಪತ್ರಿಕೆಯು ದಿನಾಂಕ: 11.01.2007 ರಂದು ಪ್ರಕಟವಾಗಿದ್ದು, ಸದರಿ ನೇಮಕಾತಿ ಅಧಿಸೂಚನೆಯ ಪುಟ ಸಂಖ್ಯೆ 8 ರಿಂದ 13 ರವರೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರಕಟಿತ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಖಾಲಿ ಹುದ್ದೆಗಳ ವರ್ಗೀಕರಣಗಳ ಮ್ಯಾಟ್ರಿಕ್ ವಿವರಗಳನ್ನು ತಾಲ್ಲೂಕುವಾರು ಪ್ರಕಟಿಸಲಾಗಿರುತ್ತದೆ. ಅದರಲ್ಲಿನ ಪುಟ ಸಂಖ್ಯೆ 8ರ ಬೆಂಗಳೂರು ದಕ್ಷಿಣ ವಲಯ-1 ಮತ್ತು ಪುಟ ಸಂಖ್ಯೆ 9ರ ಆನೇಕಲ್ ತಾಲ್ಲೂಕಿನ ಖಾಲಿ ಹುದ್ದೆ ವರ್ಗೀಕರಣವನ್ನು ಮಾತ್ರ ಈ ಕೆಳಗಿನಂತೆ ತಿದ್ದುಪಡಿ ಮಾಡಿ ಓದಿಕೊಳ್ಳುವುದು.

2006-07ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಸಹಶಿಕ್ಷಕರ ಹುದ್ದೆಗಳ ನೇಮಕಾತಿಗಾಗಿ ಮಾಟ್ರಿಕ್ಸ್ ವಿವರ (ಕನ್ನಡ)

ತಾಲ್ಲೂಕು	ಒಟ್ಟು ಹುದ್ದೆಗಳು		ಪ.ಜಾ.	ಪ.ಪಂ	ಪ್ರ-01	2-ಎ	2-ಬಿ	3-ಎ	3-ಬಿ	ಸಾಅ	ಒಟ್ಟು
ಬೆಂಗಳೂರು ದಕ್ಷಿಣ ವಲಯ-01	5(82.86)	ಇತರೆ							1	1	2
		ಗ್ರಾಮೀಣ				1					1
		ಕ.ಮ.ಅ.									
		ಯೋ.ಅ.									
		ಮಾ.ಸೈ.								1	1
		ಅಂ.ವಿ.								1	1
		ಒಟ್ಟು				1			1	3	5

2006-07ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಸಹಶಿಕ್ಷಕರ ಹುದ್ದೆಗಳ ನೇಮಕಾತಿಗಾಗಿ ಮಾಟ್ರಿಕ್ಸ್ ವಿವರ (ಕನ್ನಡ)

ತಾಲ್ಲೂಕು	ಒಟ್ಟು ಹುದ್ದೆಗಳು		ಪ.ಜಾ.	ಪ.ಪಂ	ಪ್ರ-01	2-ಎ	2-ಬಿ	3-ಎ	3-ಬಿ	ಸಾಅ	ಒಟ್ಟು
ಆನೇಕಲ್	24(09-32)	ಇತರೆ	3		1	1	1	1	1	7	15
		ಗ್ರಾಮೀಣ	1			1				3	5
		ಕ.ಮ.ಅ.				1				1	2
		ಯೋ.ಅ.				1					1
		ಮಾ.ಸೈ.								1	1
		ಅಂ.ವಿ.									
		ಒಟ್ಟು	4		1	4	1	1	1	12	24

ಉಪ ನಿರ್ದೇಶಕರು (ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ.

ಪಿ.ಆರ್. 140

IN THE COURT OF THE IV ADDL CITY CIVIL JUDGE, MAYOHALL BANGALORE

P.& S.C. 25007/2007

Petitioners:

1. Anitha Malani, D/o. Late Manuel John
2. Jessay Pramila, D/o Late Manuel John
3. Sheba Rajani, D/o Late Manuel John

All are R/at. Old No.22, St. Johns Road, Bangalore.

V/s

Respondent: - Nil -

PUBLIC NOTICE

Notice is hereby given that a petition has been made to this court U/s. 272, 278 of the Indian Succession Act for grant of letters of Administration in respect of schedule property and for income and profit derived out of it, of late Lalitha John, Who died at Bangalore on 27.06.2005.

Be it known that no caveat has been entered and the petition is posted for hearing on 26.03.2007. All persons claiming to have any interest may come and participate in the proceedings before grant of letters of Administration.

Given under my hand and seal of this court dated 26th day of February 2007.

SCHEDULE

Vacant land in old No.22, New No. 98, situated at St. John's Road, in Division No.55, Bangalore-42.

By order of the Court,
Assistant Registrar,
P.D.27 City Civil Court, Mayohall Unit, Bangalore.

IN THE COURT OF THE IV ADDL CITY CIVIL JUDGE, MAYOHALL BANGALORE
P.& S.C. 25008/2007

Petitioners:

1. M. Jayalakshmi, D/o Late R. Muniswamy,
   R/o No.126, Nethravathy Street, Udayanagar, Bangalore-16.
2. R.M. Jayaram, S/o Late R. Muniswamy,
   R/o. No.172, Railway BNC Quarters, Shivajinagar, Bangalore.
3. Krishnan, S/o Muniswamy,
   R/o. 33, 'H' Block, Champion Reefs, Kolar Gold Fields.
4. M. Parimala Devi @ Premeela Devi, D/o Late R. Muniswamy,
   R/o No. 359, Fathima School, Bangalore.

V/s

Respondent: - Nil -

PUBLIC NOTICE

Notice is hereby given that a petition has been made to this court U/s. 372 of the Indian Succession Act, for grant a Succession Certificate in respect the Terminal benefits from Employees Provident Fund commissioner and for such other benefits, of late M. Shakila, who died on 27.10.2003, at Bangalore.

Be it known that no caveat has been entered and the petition is posted for hearing on 26.03.2007. All persons claiming to have any interest may come and participate in the proceedings before grant of Succession certificate.

Given under my hand and seal of this court dated 26th day of February 2007.

By order of the Court,
Assistant Registrar,
P.D.28 City Civil Court, Mayohall Unit, Bangalore.

IN THE COURT OF THE IV ADDL CITY CIVIL JUDGE, MAYOHALL BANGALORE
P.& S.C. 25009/2007

Petitioners:

1. Smt. Mohana, W/o Late Shekar
2. Shigamani, S/o Late Thangaraju
3. Smt. Devi, W/o Shigamani

All are R/o New No.115, 1st Cross (Byetguttepalya)
\Ramaswamypalya, Maruthi Sevanagar, Bangalore-560033

V/s

Respondent: - Nil -

PUBLIC NOTICE

Notice is hereby given that a petition has been made to this court U/s. 276 of the Indian Succession Act, Praying the Hon'ble court for grant of Probate in respect of the will dated: 05.01.2006 of late Unnamalaiammal who she died on 25.01.2006 at Bangalore.

No caveat has been entered and the petition is posted for hearing on 23.03.2007. All persons claiming to have any interest, may come and participate in the proceedings before grant of Probate in respect immovable property bearing Plot No.53 forming portion of Sy.No.19 situated in Byatguttepalya, Bangalore North Taluk. Presently bearing No.115, 1st Cross, Ramaswamypalya, Maruthisevanagar, Bangalore-33.

Given under my hand and seal of this court dated 26th day of February 2007.

By order of the Court,
Assistant Registrar,
City Civil Court, Mayohall Unit, Bangalore.

P.D.29

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಮಂಡ್ಯ ವಿಭಾಗ, ಮಂಡ್ಯ

"ಮುಟ್ಟುಗೋಲು ವಾಹನಗಳ ಟೆಂಡರ್–ಕಂ–ಮರು ಹರಾಜು ಪ್ರಕಟಣೆ"

ಸಂಖ್ಯೆ: ಎಸ್ಎಎಸ್/ಅಅ/ವಾ.ಹ/06–07, ದಿನಾಂಕ: 26ನೇ ಫೆಬ್ರವರಿ 2007

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮಂಡ್ಯ ವಿಭಾಗದಲ್ಲಿ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯಲ್ಲಿ ಭಾಗಿಯಾಗಿದ್ದ ವಾಹನಗಳನ್ನು ವಿಚಾರಣೆ ನಡೆಸಿ ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವ ಈ ಕೆಳಕಂಡ ವಾಹನಗಳನ್ನು ಟೆಂಡರ್–ಕಂ–ಹರಾಜು ಮೂಲಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ಅವರಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಂದ ವಾಹನಗಳು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಬಹಿರಂಗ ಹರಾಜು ಮಾಡಲಾಗುವುದು. ಇಚ್ಛೆಯುಳ್ಳವರು ಟೆಂಡರ್–ಕಂ–ಹರಾಜಿನಲ್ಲಿ ಭಾಗವಹಿಸಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ.	ವಾಹನದ ವಿವರ	ವಾಹನದ ಸಂಖ್ಯೆ	ವಾಹನವಿರುವ ಸ್ಥಳ ಮತ್ತು ಹರಾಜು ಸ್ಥಳ	ಹರಾಜು ದಿನಾಂಕ ಮತ್ತು ವೇಳೆ
1	ಆಟೋರಿಕ್ಷಾ	ಸಿಎಂಓ–9208	ವಲಯ ಅರಣ್ಯಾಧಿಕಾರಿ, ಮಂಡ್ಯ ವಲಯ, ಮಂಡ್ಯ ರವರ ಕಚೇರಿ ಆವರಣ	28.03.2007 ಸಾ. 4.00

ನಿಬಂಧನೆಗಳು

1. ಟೆಂಡರ್ ಫಾರಂಗಳನ್ನು ಈ ಕಛೇರಿಯಲ್ಲಿ ಹರಾಜಿನ ದಿನಾಂಕದಂದು 12 ಗಂಟೆಯವರೆಗೆ ಪ್ರತಿಯೊಂದು ಫಾರಂಗೆ ರೂ.250/– ಮತ್ತು ಅದಕ್ಕೆ ತಗಲುವ ಪ್ರಚಲಿತ ತೆರಿಗೆಗಳನ್ನು ಪಾವತಿಸಿ ಪಡೆಯಬಹುದು. ಸದರಿ ಫಾರಂನ್ನು ಅದೇ ದಿವಸ ಮಧ್ಯಾಹ್ನ 3.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ನಂತರ ಹರಾಜು ನಡೆಸಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ರವರ ಪರವಾಗಿ ರೂ.2000/– ಮುಂಗಡ ಠೇವಣಿಯನ್ನು ಡಿ.ಡಿ. ಅಥವಾ ನಗದು ರೂಪದಲ್ಲಿ ಪಾವತಿಸಿ ರಶೀದಿ ಪಡೆಯಬೇಕು.
3. ಹರಾಜಿಗೆ ಇಡಲಾಗಿರುವ ವಾಹನಗಳನ್ನು ಕಛೇರಿ ವೇಳೆಯಲ್ಲಿ ಹರಾಜಿಗಿಂತ ಮುಂಚಿತವಾಗಿ ವೀಕ್ಷಿಸಬಹುದು.
4. ಟೆಂಡರ್–ಕಂ–ಹರಾಜು ಇವೆರಡರಲ್ಲಿ ಯಾವುದು ಹೆಚ್ಚಿದೆಯೋ ಅದನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.
5. ವಾಹನವನ್ನು ಹರಾಜಿನಲ್ಲಿ ಪಡೆದವರು ವಾಹನದ ಮಾಲೀಕತ್ವ ವರ್ಗಾವಣೆ ಹಾಗೂ ದಾಖಲೆಗಳನ್ನು ಅವರ ಸ್ವಂತ ಖರ್ಚಿನಲ್ಲಿ ಹಾಗೂ ಸ್ವಂತ ಜವಾಬ್ದಾರಿಯ ಮೇಲೆ ಮಾಡಿಸಿಕೊಳ್ಳತಕ್ಕದ್ದು.
6. ಯಶಸ್ವಿ ಬಿಡ್ಡುದಾರರು ವಾಹನ ಖರೀದಿ ಮೊತ್ತದ ಶೇ.50 ರಷ್ಟು ಹಣ ಮತ್ತು ಖರೀದಿಸಿದ ಪೂರ್ಣ ಮೊತ್ತಕ್ಕೆ ಮಾರಾಟ ತೆರಿಗೆ ಶೇ.8 ಮತ್ತು ಇತರೆ ತೆರಿಗೆಗಳನ್ನು ಹರಾಜಿನ ದಿವಸವೇ ಪಾವತಿಸಬೇಕು. ಉಳಿಕೆ ಶೇ.50 ರಷ್ಟು ಮೊತ್ತವನ್ನು ಹರಾಜು ಸ್ಥಿರೀಕರಣ ಆದೇಶ ತಲುಪಿದ ಏಳು (7) ದಿವಸದೊಳಗಾಗಿ ಪಾವತಿಸಿ ಖರೀದಿಸಿರುವ ವಾಹನವನ್ನು ವಶಕ್ಕೆ ಪಡೆಯಬೇಕು.
7. ಇತರೆ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬೇಕು.

ಕೆ.ಎಂ. ನಾರಾಯಣ ಸ್ವಾಮಿ ಭಾ.ಅ.ಸೇ.,
ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ, ಮಂಡ್ಯ.

ಪಿ.ಆರ್. 129

ನಮೂನೆ–1

(9ನೇ ನಿಯಮ ನೋಡಿ)

ಸಾರ್ವಜನಿಕ ಶಿಕ್ಷಣ ಇಲಾಖೆ

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದನಿಮಿತ್ತ ಬ್ಲಾಕ್ ಯೋಜನಾ ಸಮನ್ವಯಾಧಿಕಾರಿಗಳು, ಕುಂದಗೋಳ, ಧಾರವಾಡ ಜಿಲ್ಲೆ

ಅಧಿಸೂಚನೆ

ಸರ್ಕಾರಿ ಹಿರಿಯ ಕನ್ನಡ ಹೆಣ್ಣು ಮಕ್ಕಳ ಶಾಲೆ ಸಂಶಿ ಕಛೇರಿಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ **ಶ್ರೀಮತಿ ಸುಜಾತ ಚನ್ನಬಸಯ್ಯ ರೋಣಿಮಠ** ರವರಿಗೆ ಅವರ ಹೆಸರನ್ನು **ಶ್ರೀಮತಿ ಶಶಿಧರ ಹಿರೇಮಠ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದನಿಮಿತ್ತ ಬ್ಲಾಕ್ ಯೋಜನಾ
ಸಮನ್ವಯಾಧಿಕಾರಿಗಳು, ಕುಂದಗೋಳ, ಧಾರವಾಡ ಜಿಲ್ಲೆ.

ಪಿ.ಡಿ.35

ನಮೂನೆ-1

(9ನೇ ನಿಯಮ ನೋಡಿ)

ಸಾರ್ವಜನಿಕ ಶಿಕ್ಷಣ ಇಲಾಖೆ

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದನಿಮಿತ್ತ ಬ್ಲಾಕ್ ಯೋಜನಾ ಸಮನ್ವಯಾಧಿಕಾರಿಗಳು, ಕುಂದಗೋಳ, ಧಾರವಾಡ ಜಿಲ್ಲೆ

ಅಧಿಸೂಚನೆ

ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಗುಡಗೇರಿ ಕಛೇರಿಯಲ್ಲಿ ಸಹಾಯಕ ಶಿಕ್ಷಕರಾಗಿ ಕೆಲಸ ಮಾಡುತ್ತಿರುವ ಶ್ರೀ ಮಾನಪ್ಪ ಸಕ್ರಪ್ಪ ಲಮಾಣಿ ರವರಿಗೆ ಅವರ ಹೆಸರನ್ನು ಶ್ರೀ ಮಾನಪ್ಪ ಸಕ್ರಪ್ಪ ಪೂಜಾರ ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದನಿಮಿತ್ತ ಬ್ಲಾಕ್ ಯೋಜನಾ
ಪಿ.ಡಿ.36 ಸಮನ್ವಯಾಧಿಕಾರಿಗಳು, ಕುಂದಗೋಳ, ಧಾರವಾಡ ಜಿಲ್ಲೆ.

FORM I

(See Rule 9)

DEPARTMENT OF EDUCATION

NOTIFICATION

Shri PEERAPPA.PARASAPPA.MADAR is working as P.E.Teacher in Education Department of Government High School Baad TQ:Hukkeri, Dist: Belgaum is permitted to change his name to **PEERAPPA.PARASAPPA.SARVADNYA.**

ಮುಖ್ಯೋಪಾಧ್ಯಾಯ
ಪಿ.ಡಿ.37 ಸರ್ಕಾರಿ ಪ್ರೌಢ ಶಾಲೆ, ಬಾದ, ಹುಕ್ಕೇರಿ ತಾಲ್ಲೂಕು, ಬೆಳಗಾಂವ ಜಿಲ್ಲೆ.

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ ಕಛೇರಿ, ಉಡುಪಿ

ಸಮಾಯವಧಿ ವಿಸ್ತರಣೆ

ಸಂಖ್ಯೆ: ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರು ಸೂಚನೆ/709/2006-07, ದಿನಾಂಕ: 8ನೇ ಮಾರ್ಚ್ 2007

"ವಾರ್ತಾ ಭಾರತಿ", "ಹೊಸ ದಿಗಂತ", "ಉದಯವಾಣಿ" ಮತ್ತು "ವಿಜಯ ಕರ್ನಾಟಕ" ಕನ್ನಡ ದಿನ ಪತ್ರಿಕೆಗಳಲ್ಲಿ ದಿನಾಂಕ: 27.2.2007 ಮತ್ತು 3.3.2007 ರಂದು ಪ್ರಕಟವಾದ ಈ ಕಛೇರಿ ಟೆಂಡರು ನೋಟಿಫಿಕೇಶನ್ ನಂ.1522:2006-07, ದಿನಾಂಕ: 9.2.2007ರ "ಮಂಗಳೂರು ಬಂದರು ಹೊಸ ಆಡಳಿತ ಕಛೇರಿ ಕಟ್ಟಡದ ಎರಡನೇ ಮಹಡಿಯ ನಿರ್ಮಾಣ ಕಾಮಗಾರಿಯ" ಟೆಂಡರು ಸಮಯಾವಧಿ ವಿಸ್ತರಣೆಯನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

1.	ಖಾಲಿ ಟೆಂಡರು ಫಾರ್ಮ್‌ಗೆ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ	28.3.2007 ಸಂಜೆ 4.00 ಗಂಟೆಯವರೆಗೆ
2	ಖಾಲಿ ಟೆಂಡರು ಫಾರ್ಮ್‌ಗಳನ್ನು ನೀಡುವ ಅಂತಿಮ ದಿನಾಂಕ	28.3.2007 ಸಂಜೆ 5.30 ಗಂಟೆಯವರೆಗೆ
3	ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ದಿನಾಂಕ	29.3.2007 ಸಂಜೆ 4.00 ಗಂಟೆಯವರೆಗೆ

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ, ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದು.

ಬಿ. ಗೋಪಾಲ್ ನಾಯಕ್
ಪಿ.ಆರ್. 130 ಕಾರ್ಯನಿರ್ವಾಹಕ ಇಂಜಿನಿಯರ್,
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೋಲಾರ ವಿಭಾಗ, ಕೋಲಾರ

ಬಾಬುವಾರು ಟೆಂಡರ್ ಮುಂದೂಡಿಕೆ ಪ್ರಕಟಣೆ

ಸಂಖ್ಯೆ: 42-2/2006-07, ದಿನಾಂಕ: 19ನೇ ಫೆಬ್ರವರಿ 2007

ಉಲ್ಲೇಖ: 1) ಬಾಬುವಾರು ದರದ ಟೆಂಡರ್ ಪ್ರಕಟಣೆ ಸಂಖ್ಯೆ: 42:2006-07, ದಿನಾಂಕ: 19.12.2006.
2) ಬಾಬುವಾರು ಮುಂದೂಡಿಕೆ ದರದ ಟೆಂಡರ್ ಪ್ರಕಟಣೆ ಸಂಖ್ಯೆ: 42-1:2006-07, ದಿನಾಂಕ: 25.01.2007.

ಉಲ್ಲೇಖದ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಿರುವ ಕ್ರಮ ಸಂಖ್ಯೆ: 3, 4, ಮತ್ತು 5ರ ಕಾಮಗಾರಿಗಳ ಖಾಲಿ ಟೆಂಡರ್ ಫಾರಂಗಳನ್ನು ನೀಡುವ ಹಾಗೂ ಸ್ವೀಕೃತಿ ದಿನಾಂಕಗಳನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

ಉಳಿದಂತೆ ಯಾವುದೇ ನಿಬಂಧನೆಗಳಲ್ಲಿ ಹಾಗೂ ನಿಯಮಾವಳಿಗಳಲ್ಲಿ ಬದಲಾವಣೆ ಇರುವುದಿಲ್ಲ, ಹೆಚ್ಚಿನ

ವಿವರಗಳನ್ನು ವಿಭಾಗ ಕಛೇರಿಯಲ್ಲಿ ಎಲ್ಲಾ ಕೆಲಸಗಳ ದಿನದಂದು ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನೀಯರ್,
ಪಿ.ಆರ್. 132 ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, 7ನೇ ಮಹಡಿ ಜಲಮಂಡಳಿ ಕಟ್ಟಡ, ಕಾವೇರಿ ಭವನ ಬೆಂಗಳೂರು ಇವರ ನಡವಳಿಗಳು

ವಿಷಯ: ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿನ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕಗೊಂಡ ಶ್ರೀ ವಾಲು ಜೆ ರಾಠೋಡ್ ಬಿನ್ ಜೇಮುಲು C/o ಪ್ರತಾಪ್ ಚಂದ್ ರಾಠೋಡ್, ರೆಮ್ಕೋ ಲೇ ಔಟ್, ವಿಜಯನಗರ, 2ನೇ ಸ್ಟೇಜ್, ಬೆಂಗಳೂರು–560040 ಇವರ ನೇಮಕಾತಿ ಆದೇಶವನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001, ದಿನಾಂಕ: 21.11.2001 ರನ್ವಯ ಪ್ರಕಟಿಸಿರುವ ಕೆ.ಸಿ.ಎಸ್. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟು ತುಂಬದೇ ಇರುವ ಹುದ್ದೆಗಳ) ವಿಶೇಷ ನೇಮಕಾತಿ ನಿಯಮಗಳು 2001.

2) ಈ ಕಛೇರಿ ಅಲಾಟ್‌ಮೆಂಟ್ ಆರ್ಡರ್ ಸಂಖ್ಯೆ: ಇಎಸ್‌ಟಿ–1–273/2001–02, ದಿನಾಂಕ: 14.12.2004.

3) ಈ ಕಛೇರಿಯ ನೇಮಕಾತಿ ಆದೇಶ ಸಂಖ್ಯೆ: ಇಎಸ್‌ಟಿ–1–273/2001–02, ದಿನಾಂಕ: 20.12.2004.

4) ಉಪ ನೋಂದಣಾಧಿಕಾರಿ, ಶ್ರೀರಾಂಪುರ, ಬೆಂಗಳೂರು ಇವರಿಗೆ ಬರೆದ ಈ ಕಛೇರಿಯ ಸಮಸಂಖ್ಯೆ ಜ್ಞಾಪನ ದಿನಾಂಕ: 24.01.2005.

5) ಶ್ರೀ ವಾಲು ಜೆ ರಾಠೋಡ್ ಬಿನ್ ಜೇಮುಲು C/o ಪ್ರತಾಪ್ ಚಂದ್ ರಾಠೋಡ್, ರೆಮ್ಕೋ ಲೇ ಔಟ್, ವಿಜಯನಗರ, ಬೆಂಗಳೂರು–560040 ಇವರು ಈ ಕಛೇರಿಗೆ ಸಲ್ಲಿಸಿದ ಮನವಿ ದಿನಾಂಕ: 26.02.2007.

ಪ್ರಸ್ತಾವನೆ:

ಈ ಕಛೇರಿಯ ಉಲ್ಲೇಖ (2) ರ ಅಲಾಟ್‌ಮೆಂಟ್ ಆರ್ಡರ್‌ನಲ್ಲಿ ಕೆಳಕಂಡ ಅಭ್ಯರ್ಥಿಯನ್ನು ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಯಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ, ಅಲಾಟ್ ಮಾಡಿದ್ದರ ಮೇರೆ, ಕೆಳಕಂಡ ಅಭ್ಯರ್ಥಿಯನ್ನು ಉಲ್ಲೇಖ (3)ರ ಈ ಕಛೇರಿಯ ಆದೇಶದಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿ ಅದೇ ಆದೇಶದಲ್ಲಿ ಇವರನ್ನು ಅವರ ಹೆಸರಿನ ಮುಂದೆ ಸೂಚಿಸಿದ ಕಛೇರಿಗೆ ಸ್ಥಳ ನಿಯುಕ್ತಿ ಮಾಡಿ, ಸದರಿ ನೇಮಕಾತಿ ಆದೇಶವು ಮುಟ್ಟಿದ ದಿನಾಂಕದಿಂದ ಹದಿನೈದು (15) ದಿನಗಳೊಳಗೆ ನೇಮಕಾತಿ ಮಾಡಿದ ಕಛೇರಿಯಲ್ಲಿ ತಪ್ಪದೇ ಕೆಲಸಕ್ಕೆ ಹಾಜರಾಗುವಂತೆ ಸದರಿ ಅಭ್ಯರ್ಥಿಗೆ ಸೂಚಿಸಿ, ಉಲ್ಲೇಖ (3)ರ ಸದರಿ ನೇಮಕಾತಿ ಆದೇಶವನ್ನು RPAD ಮೂಲಕ ಕೆಳಕಂಡ ಅಭ್ಯರ್ಥಿಗೆ ಕಳುಹಿಸಲಾಗಿತ್ತು.

ಕ್ರಮ ಸಂಖ್ಯೆ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	SC/ ST	ಅಭ್ಯರ್ಥಿಯನ್ನು ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ	ವರ್ಗೀಕರಣ
1	ಶ್ರೀ ವಾಲು ಜೆ ರಾಠೋಡ್ ಬಿನ್ ಜೇಮುಲು C/o ಪ್ರತಾಪ್ ಚಂದ್ ರಾಠೋಡ್, ನಂ.39–68, ಗ್ರೌಂಡ್ ಫ್ಲೋರ್, ರೆಮ್ಕೋ ಲೇ ಔಟ್, 6ನೇ ಮೈನ್, 1ನೇ ಇ ಕ್ರಾಸ್, ವಿಜಯನಗರ, 2ನೇ ಸ್ಟೇಜ್, ಬೆಂಗಳೂರು–560040	SC	ಜಿಲ್ಲಾ ನೋಂದಣಿ ಕಛೇರಿ (DUS) ಇಂದಿರಾನಗರ, ಬೆಂಗಳೂರು (ಬೆಂಗಳೂರು ಜಿಲ್ಲಾ ನೇಮಕಾತಿ ಘಟಕ)	ಪರಿಶಿಷ್ಟ ಜಾತಿ ಸಾಮಾನ್ಯ ಅಭ್ಯರ್ಥಿ ಮುಖ್ಯಪಟ್ಟಿ

ಮೇಲ್ಕಂಡ ಅಭ್ಯರ್ಥಿಗೆ RPAD ಮೂಲಕ ಕಳುಹಿಸಿದ ದಿನಾಂಕ: 20.12.2004ರ ಉಲ್ಲೇಖ (3)ರ ಈ ಕಛೇರಿಯ ನೇಮಕಾತಿ ಆದೇಶವು ಸದರಿ ಅಭ್ಯರ್ಥಿಗೆ ಜಾರಿಯಾಗದೇ Postal Authorities ರವರಿಂದ ಈ ಕಛೇರಿಗೆ ವಾಪಸ್ಸು ಬಂದ ಕಾರಣ, ಉಲ್ಲೇಖ (4)ರ ಜ್ಞಾಪನದ ಮೂಲಕ ಈ ಅಭ್ಯರ್ಥಿಯ ಎರಡು ನೇಮಕಾತಿ ಆದೇಶಗಳನ್ನು ಉಪ ನೋಂದಣಾಧಿಕಾರಿ, ಶ್ರೀರಾಂಪುರ, ಬೆಂಗಳೂರು ಇವರಿಗೆ ಕಳುಹಿಸಿ ಉಲ್ಲೇಖ (3)ರ ಒಂದು ನೇಮಕಾತಿ ಆದೇಶವನ್ನು ಸದರಿ ಅಭ್ಯರ್ಥಿಗೆ ಖುದ್ದಾಗಿ ಜಾರಿ ಮಾಡಿ ಈ ಬಗ್ಗೆ ಅಭ್ಯರ್ಥಿಯ ಸ್ವೀಕೃತಿ ಪಡೆದು ಅದನ್ನು ಈ ಕಛೇರಿಗೆ ಕಳುಹಿಸುವಂತೆ ಕೋರಲಾಯಿತು.

ಇದಕ್ಕೆ ಉತ್ತರವಾಗಿ ಉಪ ನೋಂದಣಾಧಿಕಾರಿ, ಶ್ರೀರಾಂಪುರ, ಬೆಂಗಳೂರು ಇವರು ಪತ್ರ ಸಂಖ್ಯೆ: ಶ್ರೀ ಉನೋಕ–308/2004–05 ದಿನಾಂಕ: 9.2.2005ರ ಪತ್ರದಲ್ಲಿ ಸದರಿ ಅಭ್ಯರ್ಥಿಯ ನೇಮಕಾತಿ ಆದೇಶದಲ್ಲಿ ನಮೂದಿಸಲಾದ ವಿಳಾಸಕ್ಕೆ ಹೋಗಿ ವಿಚಾರಿಸಲಾಗಿ, ವಾಲು ಜೆ ರಾಠೋಡ್ ಎಂಬುವರು ಯಾರೂ ಸದರಿ ವಿಳಾಸದಲ್ಲಿ ವಾಸವಾಗಿರುವುದಿಲ್ಲವೆಂಬುದಾಗಿ ತಿಳಿದು ಬಂತೆಂದು ವರದಿ ಮಾಡುತ್ತಾ ಈ ಅಭ್ಯರ್ಥಿಯ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ಯಾರಿಗೂ ಜಾರಿ ಮಾಡದೇ ಅದನ್ನು ಈ ಕಛೇರಿಗೆ ಹಿಂದಿರುಗಿಸಿದ ಕಾರಣ ಉಲ್ಲೇಖ (3)ರ ಸದರಿ ನೇಮಕಾತಿ ಆದೇಶವನ್ನು ಸದರಿ ಅಭ್ಯರ್ಥಿಯು ಮೇಲ್ಕಂಡ ವಿಳಾಸಕ್ಕೆ ಇನ್ನೊಮ್ಮೆ RPAD ಮೂಲಕ ಈ ಕಛೇರಿಯಿಂದಲೇ ಕಳುಹಿಸಲಾಯಿತು.

ಆದರೆ, ಈ ರೀತಿ ಎರಡನೇ ಬಾರಿ RPAD ಮೂಲಕ ಮೇಲ್ಕಂಡ ವಿಳಾಸಕ್ಕೆ ಕಳುಹಿಸಿದ ಉಲ್ಲೇಖ (3)ರ ನೇಮಕಾತಿ ಆದೇಶವು ಸಹ ಈ ಬಾರಿಯೂ ಸದರಿ ಅಭ್ಯರ್ಥಿಗೆ ಜಾರಿಯಾಗದೇ Postal Authorities ರವರಿಂದ ಈ ಕಛೇರಿಗೆ ವಾಪಸ್ಸು ಬಂದ ಕಾರಣ ಈ ಅಭ್ಯರ್ಥಿಯ where abouts ತಿಳಿಯದೇ ಹೋದ ಕಾರಣ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ಸದರಿ ಅಭ್ಯರ್ಥಿಗೆ ಜಾರಿ ಮಾಡಲು ಸಾಧ್ಯವಾಗಲಿಲ್ಲ.

ಈಗ, ಸದರಿ ಅಭ್ಯರ್ಥಿಯು ದಿನಾಂಕ: 26.2.2007 ರಂದು ಉಲ್ಲೇಖ (5) ರನ್ವಯ ಲಿಖಿತ ಮನವಿಯೊಂದನ್ನು ಈ ಕಛೇರಿಗೆ ಸಲ್ಲಿಸಿ, ತಾವು ಈಗಾಗಲೇ ಮತ್ತೊಂದು ಕಡೆ ಕಾರ್ಯ ನಿರ್ವಹಿಸುತ್ತಿರುವುದರಿಂದ ತಮ್ಮ ಈ ನೇಮಕಾತಿಯನ್ನು ರದ್ದುಗೊಳಿಸಿ, ಉಳಿದ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಹೊರಡಿಸಲು ತಮ್ಮ ಅಭ್ಯಂತರಗಳು ಇರುವುದಿಲ್ಲವೆಂದು ಮನವಿ ಮಾಡಿರುತ್ತಾರೆ.

ಮೇಲ್ಕಂಡ ಕಾರಣಗಳಿಂದ ಈ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಪಡಿಸುವುದು ಸೂಕ್ತವೆಂದು ಮನಗಂಡು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಸಿಬ್ಬಂದಿ 1–273/2001–02, ಬೆಂಗಳೂರು, ದಿನಾಂಕ: 13ನೇ ಮಾರ್ಚ್ 2007

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಉಲ್ಲೇಖ (1) ರ ಅಧಿಸೂಚನೆ ಅನ್ವಯ ಹಾಗೂ 1977ರ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳಲ್ಲಿನ 18(3)ನೇ ನಿಯಮದನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಮೇಲ್ಕಂಡ ಅಭ್ಯರ್ಥಿಯಾದ ಶ್ರೀ ವಾಲು ಜೆ ರಾಠೋಡ್ ಬಿನ್ ಜೇಮುಲು C/o ಪ್ರತಾಪ್ ಚಂದ್ ರಾಠೋಡ್, ನಂ.39–68, ರೆಮ್ಕೋ ಲೇ ಔಟ್, 6ನೇ ಮೈನ್, 1ನೇ ಇ ಕ್ರಾಸ್, ವಿಜಯನಗರ, 2ನೇ ಸ್ಟೇಜ್, ಬೆಂಗಳೂರು–560040 ಇವರನ್ನು ಈ ಇಲಾಖೆಯಲ್ಲಿನ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಬ್ಯಾಕ್‌ಲಾಗ್ ಹುದ್ದೆಯಲ್ಲಿ ದ್ವಿತೀಯ ದರ್ಜೆ ಸಹಾಯಕರೆಂದು ನೇಮಕ ಮಾಡಿದ ಈ ಕಛೇರಿಯ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಮೇಲ್ಕಂಡ ಅಭ್ಯರ್ಥಿಯು ಈ ತಕ್ಷಣದಿಂದ ಈ ಇಲಾಖೆಯಲ್ಲಿನ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯ ನೇಮಕಾತಿ ಹಕ್ಕನ್ನು ಕಳೆದುಕೊಂಡಿರುವರೆಂದು ಹಾಗೂ ದ್ವಿತೀಯ ದರ್ಜೆ ಸಹಾಯಕರ ಬ್ಯಾಕ್‌ಲಾಗ್ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂದು ಹಾಗೂ ಸದರಿಯವರು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಸಾಧಿಸತಕ್ಕದ್ದಲ್ಲವೆಂದು ಈ ಮೂಲಕ ಆದೇಶಿಸಿದೆ.

ಸಿ. ಕೃಷ್ಣಪ್ಪ

ಪಿ.ಆರ್. 135

ನೇಮಕಾತಿ ಪ್ರಾಧಿಕಾರಿ ಹಾಗೂ ನೋಂದಣಿ ಮಹಾಪರಿವೀಕ್ಷಕರು
ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

KARNATAKA STATE BOARD OF WAKF

[Constituted by the Govt. of Karnataka under the Wakf Act, 1995 (Central Act-43 of 95)]

Darul Awkaf, #6, Cunningham Road, Bangalore-52

No. KBW/MSC/3/DKD/99-2000, Bangalore, Dated: 4th January 2007

FORM NO.60

(see rule 45 (1))

NOTIFICATION

Subject: Sale of immoveable Wakf property Sy.No.60-1A2 & of Jumma Masjid & Sayyed Madani Dargah, Ullal, Mangalore Taluk, D.K. District.

Ref: Application dated: 17.11.2003 of the President, Jumma Masjid & Sayyed Madani Dargah, Ullal, Mangalore Taluk, D.K. District Through District Wakf Advisory Committee, D.K. District.

Whereas, the President, Jumma Masjid & Sayyed Madani Dargah, Ullal, Mangalore Taluk, Dakshina Kannada District, has made an above application through the Chairman, District Wakf Advisory Committee Dakshina Kannada District vide letter No. DWAC/DK/33/2003-04, Dated: 5.12.2003, to the Board under Section 51 (1) of the Wakf Act 1995 to sale the immovable properties of above said Wakf institution shown in the Schedule below.

SCHEDULE

Sl. No.	Details of Immoveable property	Location	Sy.No. Property No.	Extent	Boundaries
1	Shops & Residential Plots	Munnur Village	60-1 A2	14-28 (Out of 15-53)	N: Sy.No.67 S: Sy.No.95 E: Sy.No.63 W: Sy.No.60/1A1, 60/1B & Shomeshwara Village
2	Residential Houses	Permannur Village	114-1A	0-35	N: Sy.No.63/4 S: Sy.No.114/1B E: Sy.No.114/1B S: Sy.No.63/2A.

It is hereby notified for the information of any person interested in the Wakf to file Objections/Suggestions, if any, with regard to the above transaction addressed to the Chief Executive Officer, Karnataka State Board of Wakfs, Bangalore, within fifteen (15) days from the date of publication of this Notification published in the official Gazette.

Chief Executive Officer,
Karnataka State Board of Wakfs.

P.D. 30

ZOO AUTHORITY OF KARNATAKA

OFFICE OF THE MEMBER SECRETARY, SRI CHAMARAJENDRA ZOOLOGICAL GARDENS PREMISES, INDIRANAGAR, MYSORE-570 010

NOTIFICATION

No. MSY/10-97/EF/2006/243, Dated: 16th March 2007

Subject: Revision of Entry Fee of Bannerghatta Biological Park, Bangalore-Reg.

Ref: 1) Proceedings of 103rd Governing Council Meeting held on 26.12.2006.

2) Letter No. A1/BBP/Entry Fee/2006-07, dated: 2.2.2007 & 15.3.2007 of the Executive Director, Bannerghatta Biological Park, Bangalore.

PREAMBLE:

The Governing Council in its 103rd Governing Council Meeting held on 26.12.2006 reviewed the particulars of the number of visitors to Bannerghatta Biological Park, Bangalore, and the amount collected for the last 3 years, and the date of last revision with the amount of pre-revision, and opined that a small hike in the entry fee is to be made applicable from the next financial year. Further, Governing Council resolved and directed the Member-Secretary to hike the entry fee of the Zoo & Safaris (Except Butterfly Park) of Bannerghatta Biological Park, Bangalore by 10% rounded off to Rs.5/- with effect from 1.4.2007. Hence this order.

ORDER

In the exercise of the powers delegated to the undersigned by the Governing Council of Zoo Authority of Karnataka in its 103rd Meeting the entry fee of Bannerghatta Biological Park, Bangalore, is revised w.e.f. 1.4.2007 as indicated below:

Sl. NO.	Description	Tariff						Others
		Adults		Children		Senior Citizens		
		Holidays	Week days	Holidays	Week days	Holidays	Week days	
1	2	3	4	5	6	7	8	9
1	Zoo	35	30	20	15	25	20	
2	Tiger & Lion Safaris	55	35	30	20	45	30	
3	Grand Safari (Tiger Safari, Lion Safari, Bear Safari & Herbivore Safari)	90	70	45	35	55	45	
4	Elephant-Safari inside biopark forest (1.00 hr)	110	90	55	45	90	70	
5	Elephant Joy ride	45	35	25	20	35	25	
6A	Long trek/Nature walk through natural forest of bio-park & view bison, chital, sambar, black buck, crocodile etc., (1 1/2 to 2 hrs)	55	55	25	25	45	45	

1	2	3	4	5	6	7	8	9
6B	Short trek Nature walk through natural forest of bio-park & view bison, chital, sambar, black buck, crocodile etc., (1 hr)	35	35	15	15	25	25	
7	Others a) Camera-Regular b) Video Camera c) Camera 8 mm x 16mm							 20 110 110

Note: (i) Holidays include all Saturdays and Sundays, the entire month of May and other holidays as declared by the Govt.

(i) Children would mean those of age band between above 5 years, upto and including 12 years.

(ii) For Children of 5 years and below-free of tariff.

(iii) Persons above 60 are senior citizens. (Proof to be produced)

(iv) For the Student group (including accompanying teachers). 50% discount of adult rates is allowed.

(v) It is compulsory for a guide provided by Bio-Park to accompany trekking/nature walk groups. The Tariff shown is inclusive of guide charges assuming a minimum of 10 members.

(vi) Physically/Mentally Challenged persons may be offered concessions/waiver, at the discretion of the Executive Director.

Additional Principal Chief Conservator of Forests
and Member Secretary,
Zoo Authority of Karnataka.

P.D.31

ನಮೂನೆ-1
(ನಿಯಮ-9 ನೋಡಿ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
ಅಧಿಸೂಚನೆ

ಸಂಖ್ಯೆ: ಸಿಆಸುಇ 28 ಆಸೇಇ 2007, ಬೆಂಗಳೂರು, ದಿನಾಂಕ: 3ನೇ ಫೆಬ್ರವರಿ 2007

ಶ್ರೀ ಎನ್. ಶಿವಶಂಕರ, ಕೆ.ಎ.ಎಸ್. (ಕಿರಿಯ ಶ್ರೇಣಿ) ಪರೀಕ್ಷಾರ್ಥಿ ಅಧಿಕಾರಿ (ಹಾಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ತರಬೇತಿಯಲ್ಲಿ ಇರುವವರು), ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಬಿ.ವಿ.ಎಸ್.ಸಿ., ಪದವಿ ಪಡೆದಿರುವುದರಿಂದ ಇವರ ಹೆಸರನ್ನು **ಡಾ. ಶಿವಶಂಕರ ಎನ್.** ಎಂದು ಸರ್ಕಾರಿ ದಾಖಲೆಗಳಲ್ಲಿ ನಮೂದಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಚ್.ಆರ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2).

ಪಿ.ಡಿ.42

ನಮೂನೆ-1
(ನಿಯಮ-9 ನೋಡಿ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
ಅಧಿಸೂಚನೆ

ಸಂಖ್ಯೆ: ಸಿಆಸುಇ 318 ಸಿಸೇನಿ 2006, ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2007

ಕರ್ನಾಟಕ ಸರ್ಕಾರ ಸಚಿವಾಲಯದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಮೌಲ್ಯಮಾಪನ ವಿಭಾಗದಲ್ಲಿ ದಲಾಯತ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ರಾಧಮ್ಮ ಇವರಿಗೆ ಅವರ ಹೆಸರನ್ನು **"ಶ್ರೀಮತಿ ಕೆ.ಇ. ಕೀರ್ತಿ"** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ನೇಮಕಾತಿ ಪ್ರಾಧಿಕಾರದ ಹೆಸರಿನಲ್ಲಿ ಹಾಗೂ ಅವರ ಆಜ್ಞಾನುಸಾರ,
ಪರಂಧಾಮಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-3).

ಪಿ.ಡಿ.43